# ತೃಣ ಧಾನ್ಯ ಬೆಳೆಯಲು ರೈತರಿಗೆ ಪ್ರೋತ್ಸಾಹಿಸಿ

**ವಿಕ ಸುದ್ದಿಲೋಕ** ಚಿತ್ರದುರ್ಗ

ಕಡಿಮೆ ನೀರಿನಲ್ಲಿ ಉತ್ತಮ ಇಳುವರಿ ಪಡೆಯಬಹುದಾದ ಪಾರಂಪರಿಕ ಬೆಳೆಗಳಾದ ತೃಣಧಾನ್ಯಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹಿಸಬೇಕು ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ, ಪಶು ಸಂಗೋಪನೆ ಸೇರಿದಂತೆ ನಾನಾ ಇಲಾಖೆ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ಮಾತನಾಡಿ, ತೃಣಧಾನ್ಯ ಕೇಂದ್ರೀಕೃತ ಸಮಗ್ರ ಕೃಷಿ ಪದ್ಧತಿ ಅಳವಡಿಸಲು ರೈತರಿಗೆ ಅರಿವು ಮತ್ತು ಜಾಗೃತಿ ಮೂಡಿಸಬೇಕಿದೆ ಎಂದರು.

ಚಿತ್ರದುರ್ಗ ಜಿಲ್ಲೆಯಲ್ಲಿ ತೃಣಧಾನ್ಯ ಕೇಂದ್ರೀಕೃತ ಸಮಗ್ರ ಕೃಷಿ ಪದ್ಧತಿ ಅಳವಡಿಸಲು ಹಿರಿಯೂರು ತಾಲೂಕು ರಂಗೇನಹಳ್ಳಿ ಗ್ರಾಪಂ ವ್ಯಾಪ್ತಿಯ ಶಿಡ್ಲಯನಕೋಟೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ರೇಷ್ಮೆ, ಮೀನುಗಾರಿಕೆ, ಅರಣ್ಯ ಸೇರಿದಂತೆ ನಾನಾ ಇಲಾಖೆಗಳ ನೆರವು ಪಡೆದು ಮಾದರಿ ಗ್ರಾಪಂ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.



**ಚಿತ್ರದುರ್ಗದ ಜಿಪಂ ಮಿನಿ ಸಭಾಂಗಣದಲ್ಲಿ ನಡೆದ ನಾನಾ ಇಲಾಖೆಗಳ ಸಭೆಯಲ್ಲಿ ಸಮಗ್ರ ಕೃಷಿ ಪದ್ಧತಿ ತಜ್ಞ ಡಾ.ನಾರಾಯಣ ಗೌಡ ಮಾತನಾಡಿದರು.**

ಸಮಗ್ರ ಕೃಷಿ ಪದ್ಧತಿ ತಜ್ಞ ಡಾ.ನಾರಾಯಣ ಗೌಡ ಮಾತನಾಡಿ, ಚಿತ್ರದುರ್ಗ ಜಿಲ್ಲೆ ಫಲವತ್ತಾದ ಪ್ರದೇಶ. ಆದರೆ ಮಳೆ ಕೊರತೆ ಇದೆ. ಪ್ರಸ್ತುತ ದಿನಗಳಲ್ಲಿ ಕುಡಿಯುವ ನೀರಿಗೂ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣ ಆಗಿದೆ. ಈಗ ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡದಿದ್ದರೆ ಮುಂದೆ ಯಾರೂ ರೈತರಾಗುವುದಿಲ್ಲ. ದಿನದಿಂದ ದಿನಕ್ಕೆ ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿದೆ. ರೈತ ಬೆಳೆಯುವ ಬೆಳೆಯ ಶೇ.30ರಷ್ಟು ಮಾತ್ರ ಅವನ ಕೈ ಸೇರುತ್ತಿದೆ. ಉಳಿದ 70 ಭಾಗ ಕಂಡವರ ಪಾಲಾಗುತ್ತಿದೆ. 1975 ರಲ್ಲಿ ತೆಂಗಿನ ಕಾಯಿ ಬೆಲೆ 5 ರೂ. ಇತ್ತು. ಈಗಲೂ ಅಷ್ಟೇ ಇದೆ. ಆದರೆ, ರೈತ ಉಪಯೋಗಿಸುವ ವಸ್ತುಗಳ ಬೆಲೆ 100 ಪಟ್ಟು, ಕೂಲಿ 300 ಪಟ್ಟು ಹೆಚ್ಚಾಗಿದೆ. ಹಾಗಾಗಿ ಶೇ.70 ಭಾಗ ರೈತನಿಗೆ ಸಿಗುವಂತೆ ಮಾಡಿದರೆ ಮಾತ್ರ ಚೇತರಿಸಿಕೊಳ್ಳಬಹುದು ಎಂದರು.

ನವಣೆ ಬೆಳೆದು ಅದನ್ನು ಸಂಸ್ಕರಿಸಿ ಮಾರುಕಟ್ಟೆಗೆ ತಂದರೆ 50 ರೂ.ವರೆಗೆ ಬೆಲೆ ದೊರೆಯಲಿದೆ. ಬೆಂಗಳೂರು ಕಡೆಗಳಲ್ಲಿ 50 ರಿಂದ 100 ರೂ. ಕೊಟ್ಟು ಖರೀದಿ ಮಾಡುತ್ತಿದ್ದಾರೆ. ರೈತರು ಉತ್ಪನ್ನ ಬೆಳೆಯುವುದರ ಜತೆಗೆ ಮೌಲ್ಯವರ್ಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಜಿಪಂ ಸಿಇಒ ನಿತೇಶ್ ಪಾಟೀಲ್ ಮಾತನಾಡಿ, ಗ್ರಾಪಂ ವ್ಯಾಪ್ತಿಯಲ್ಲಿ ಬತ್ತಿರುವ ಕೊಳವೆ ಬಾವಿಗಳಿಗೆ ಪುನಶ್ಚೇತನಗೊಳಿಸಲು ತಲಾ 20 ಸಾವಿರ ರೂ. ನೀಡುವ ಭರವಸೆ ನೀಡಿದರು.

ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಪ್ರಸನ್ನಕುಮಾರ್, ಉಪ ಅರಣ್ಯ ಸಂರಕ್ಷಕ ನಟರಾಜ್ ದೇಸಾಯಿ ಮಾತನಾಡಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣ್, ಮಳೆನೀರು ಕೊಯ್ಲು ತಜ್ಞ ಡಾ.ದೇವರಾಜ ರೆಡ್ಡಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಬಾಲಕೃಷ್ಣ ಜಿಲ್ಲೆಯ ಕೆಲ ಪ್ರಗತಿಪರ ರೈತರು ಉಪಸ್ಥಿತರಿದ್ದರು.